**ಪಾಠ–1** **ಡಿಸೆಂಬರ್ 28–ಜನವರಿ 3**

# ಓದುವಿಕೆಯಿಂದ ತಿಳುವಳಿಕೆಗೆ



**<u>ಸಬ್ಬತ್ತಿನ ಮಧ್ಯಾಹ್ನ :</u>** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಲೂಕ 24:25–27 ಮತ್ತು 2 ಪೇತ್ರ 3:11–13, ಯೋಹಾನ 3:3–10, ಅರಣ್ಯಕಾಂಡ 14:34, ದಾನಿಯೇಲ 9:23, 10:11,12.

**ಸ್ಮರಣವಾಕ್ಯ : ಫಿಲಿಪ್ಪನು ಓಡಿಹೋಗಿ, ಆ ಮನುಷ್ಯನು ಯೆಶಾಯ ಪ್ರವಾದಿಯ ಗ್ರಂಥವನ್ನು ಓದುತ್ತಿರುವುದನ್ನು ಕೇಳಿ– "ಎಲೈ ನೀನು ಓದುವುದು ನಿನಗೆ ತಿಳಿಯುತ್ತದೋ?" ಎಂದನು (ಅ.ಕೃ. 8:30).**

ದಾನಿಯೇಲನ ಪುಸ್ತಕವನ್ನು ಈ ತ್ರೈಮಾಸಿಕದಲ್ಲಿ ಅಧ್ಯಯನ ಮಾಡುತ್ತೇವೆ. ನಮ್ಮ ಸಭೆಯು ಹುಟ್ಟಿದ ಕಥೆಯನ್ನು ದಾನಿಯೇಲನ ಪುಸ್ತಕದಲ್ಲಿ (ಪುಟಗಳಲ್ಲಿ) ಅಡಕವಾಗಿದೆ. ಇದನ್ನು ಅಧ್ಯಯನ ಮಾಡುವುದಕ್ಕೆ ತೊಡಗುವಾಗ ಈ ಕೆಳಗಿನ ಅಂಶಗಳನ್ನು ನಮ್ಮ ಮನಸ್ಸಿನಲ್ಲಿ "ಮಾದರಿ"ಯಂತೆ ಇಟ್ಟುಕೊಂಡು ಮುಂದೆ ಸಾಗೋಣ.

ಒಂದನೆಯದು, ಇಡೀ ಸತ್ಯವೇದದ ಕೇಂದ್ರ ಕ್ರಿಸ್ತನಾಗಿರುವಂತೆ ದಾನಿಯೇಲನ ಪುಸ್ತಕದ ಕೇಂದ್ರವೂ ಕ್ರಿಸ್ತನೇ ಆಗಿದ್ದಾನೆ ಎಂಬುದನ್ನು ಯಾವಾಗಲೂ ನೆನಪಿಸಿಕೊಳ್ಳೋಣ.

ಎರಡನೆಯದು ಸುಂದರವಾದ ಸಾಹಿತ್ಯದ ಗುಣವನ್ನು ತೋರಿಸಲು ಮತ್ತು ಪ್ರಧಾನ ವಿಷಯವನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ

ದಾನಿಯೇಲನ ಪುಸ್ತಕವನ್ನು ಕ್ರಮಪಡಿಸಲಾಗಿದೆ.

ಮೂರನೆಯದು, ದಾನಿಯೇಲ್ ಪುಸ್ತಕದಲ್ಲಿ ಶಾಸ್ತ್ರೀಯ ಪ್ರವಾದನೆಗಳಿಗೂ ಮಹಾವಿನಾಶದ ಪ್ರವಾದನೆಗಳಿಗೂ ಇರುವ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳಬೇಕು.

ನಾಲ್ಕನೆಯದು, ದಾನಿಯೇಲನು ಪುಸ್ತಕದಲ್ಲಿ 'ಕಾಲಪ್ರವಾದನೆಗಳ ಬಗ್ಗೆ ಅಧ್ಯಯನ ಮಾಡುವಾಗ ದೀರ್ಘಾವಧಿ ಪ್ರವಾದನೆಯ ಕಾಲವನ್ನು ವರ್ಷ-ದಿನದ ನಿಯಮಾನುಸಾರ ಲೆಕ್ಕ ಮಾಡಿರುವುದನ್ನು ಅರ್ಥಮಾಡಿಕೊಳ್ಳಬೇಕು.

ಐದನೆಯದು ದಾನಿಯೇಲನ ಪುಸ್ತಕವು ಪ್ರವಾದನೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಕೊಡುವುದರ ಜೊತೆಗೆ ನಮ್ಮ ವೈಯಕ್ತಿಕ ಜೀವನಕ್ಕೆ ಸುಸಂಗತವಾಗಿರುವುದನ್ನು ಒತ್ತಿ ಹೇಳುತ್ತದೆ.

ಈ ಪಾಠವನ್ನು ಜನವರಿ 4ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಡಿಸೆಂಬರ್ 29**

## ಕ್ರಿಸ್ತನು ದಾನಿಯೇಲ ಪುಸ್ತಕದ ಕೇಂದ್ರ ಬಿಂದು

ಓದಿರಿ : ಲೂಕ 24:25-27, ಯೆಹಾನ 6:29 ಮತ್ತು 2 ಕೊರಿಂಥ 1:19,20 ಯಾವ ರೀತಿಯಾಗಿ ಕ್ರಿಸ್ತನು ಪರಿಶುದ್ಧ ಗ್ರಂಥದ ಕೇಂದ್ರಬಿಂದುವಾಗಿದ್ದಾನೆ.

ಯೇಸುವು ಪರಿಶುದ್ಧ ಗ್ರಂಥದಲ್ಲಿರುವಂತೆ ದಾನಿಯೇಲನ ಪುಸ್ತಕದಲ್ಲಿಯೂ ಕೇಂದ್ರಬಿಂದುವಾಗಿದ್ದಾನೆ. ಉದಾಹರಣೆ: ಒಂದನೇ ಅಧ್ಯಾಯವು ಪರಿಮಿತವಾದ ಪರಿಪೂರ್ಣವಾದ ರೀತಿಯಲ್ಲಿ ದಾನಿಯೇಲನ ಜೀವಿತಾನುಭಾವವು ಕ್ರಿಸ್ತನ ಜೀವಿತಾನುಭವಕ್ಕೆ ಸದೃಶವಾಗಿರುವುದನ್ನು ತೋರಿಸುತ್ತದೆ. ದಾನಿಯೇಲನು ಬ್ಯಾಬಿಲೇನ್ ಸಂಸ್ಥಾನದಲ್ಲಿ ಅಂಧಕಾರದ ವಿರುದ್ಧ ನಿಂತಹಾಗೆಯೇ ಕ್ರಿಸ್ತನು ಈ ಪಾಪತುಂಬಿದ ಲೋಕದಲ್ಲಿ ಅಂಧಕಾರಶಕ್ತಿಯನ್ನು ಎದುರಿಸಿ ಜೀವಿಸಲು ಪರಲೋಕವನ್ನು ಬಿಟ್ಟುಬಂದನು. ಅಲ್ಲದೆ ದಾನಿಯೇಲ ಮತ್ತು ಆತನ ಸ್ನೇಹಿತರು ಬ್ಯಾಬಿಲೋನಿನ ಸಂಸ್ಕೃತಿಯ ಸವಾಲನ್ನು ಎದುರಿಸುವುದಕ್ಕೆ ಕ್ರಿಸ್ತನಂತಹ ಬುದ್ಧಿಯನ್ನು ಮೇಲಿನಿಂದ ಪಡೆದುಕೊಂಡಿದ್ದರು. 2ನೇ ಅಧ್ಯಾಯವು ಎಲ್ಲಾ

ರಾಜ್ಯಗಳನ್ನು ನಾಶಪಡಿಸಿ ಅದರ ಸ್ಥಳದಲ್ಲಿ ಬರುವ ಕ್ರಿಸ್ತನ ರಾಜ್ಯವನ್ನು ಸೂಚಿಸುವ ಬಂಡೆಯ ಚಿತ್ರವನ್ನು ವಿವರಿಸುತ್ತದೆ. 3ನೇ ಅಧ್ಯಾಯದಲ್ಲಿ ಕ್ರಿಸ್ತನು ತನ್ನ ನಂಬಿಗಸ್ತ ಸೇವಕರೊಂದಿಗೆ ಆವಿಗೆಯಲ್ಲಿ ನಡೆದಾಡುವುದನ್ನು ನೋಡುತ್ತೇವೆ. 4ನೇ ಅಧ್ಯಾಯದಲ್ಲಿ ರಾಜನಾದ ನೆಬೂಕದ್ನೆಚ್ಚರನನ್ನು ಸ್ವಲ್ಪಕಾಲ ಸಿಂಹಾಸನದಿಂದ ತೆಗೆದುಹಾಕಿ ಆತನಿಗೆ ಸಮಸ್ತವನ್ನು ಪರಲೋಕದೇವರು ಆಳುತ್ತಾನೆಂಬ ತಿಳುವಳಿಕೆಯು ಉಂಟಾಗುವುದನ್ನು ನೋಡುತ್ತೇವೆ (ದಾನಿ 4:26). ಪರಲೋಕ ಆಳುತ್ತದೆ ಎಂಬುದು ಮನುಷ್ಯಕುಮಾರನಾದ ಯೇಸುಕ್ರಿಸ್ತನನ್ನು ನೆನಪಿಸುತ್ತದೆ (ದಾನಿ 7:13). ದಾನಿಯೇಲ 7ನೇ ಅಧ್ಯಾಯದಲ್ಲಿ ವಿವರಿಸಿರುವಂತೆ ರಾಜ್ಯ ಮತ್ತು ಆಡಳಿತವು ಮನುಷ್ಯಕುಮಾರನಿಗಾಗುತ್ತದೆ.

5ನೇ ಅಧ್ಯಾಯವು ಅರಸನಾದ ಬೇಲೆಶೆಚ್ಚರನು ರಾತ್ರಿಯಲ್ಲಿ ಕುಡಿದು ಆನಂದ ಲಹರಿಯಲ್ಲಿರುವಾಗ ಪಾರಸಿಯ ರಾಜನಿಂದ ಸೋಲಿಸಲ್ಪಟ್ಟು ಸಿಂಹಾಸನ ಕಳೆದುಕೊಂಡನು. ಇದು ಸೈತಾನನು ಯೇಸುಕ್ರಿಸ್ತನಿಂದ ಮತ್ತು ಆತನ ಸೂತರಿಂದ ಸೋಲಿಸಲ್ಪಟ್ಟು ಅಂತ್ಯಕಾಲದ ಬ್ಯಾಬಿಲೋನಿಗೆ ಮುನ್ಸೂಚನೆಯಾಗಿದ್ದಾನೆ. 6ನೇ ಅಧ್ಯಾಯವು ಯೇಸುಕ್ರಿಸ್ತನ ವಿರುದ್ಧ ಮಹಾಯಾಜಕರು ಹೊರಿಸಿದ ಸುಳ್ಳು ಆರೋಪಗಳನ್ನು ನೆನಪಿಸುವ ದಾನಿಯೇಲನ ಮೇಲಿನ ಆರೋಪ ಮಾಡಲು ನಡೆಸಿದ ಸಂಚನ್ನು ಒಳಗೊಂಡಿದೆ. ಇಲ್ಲಿರುವ ಇನ್ನೂ ಹೆಚ್ಚಿನ ಸಾಮ್ಯತೆ ಏನೆಂದರೆ ದಾನಿಯೇಲನನ್ನು ಉಳಿಸಲು ಅರಸನಾದ ದಾರ್ಯಾವೆಷನು ಪ್ರಯತ್ನಪಟ್ಟಂತೆ ಯೇಸುಕ್ರಿಸ್ತನನ್ನು ಉಳಿಸಲು ದೇಶಾಧಿಪತಿಯಾದ ಪಿಲಾತನು ವಿಫಲ ಪ್ರಯತ್ನಗಳನ್ನು ನಡೆಸಿದನು (ಮತ್ತಾಯ 27:17–24).

ದಾನಿಯೇಲ 7ನೇ ಅಧ್ಯಾಯವು ಯೇಸುಕ್ರಿಸ್ತನು ಮನುಷ್ಯಕುಮಾರನಾಗಿ ರಾಜ್ಯವನ್ನು ಪಡೆದು ತನ್ನ ಜನರನ್ನು ಆಳುವುದನ್ನು ಚಿತ್ರಿಸುತ್ತದೆ. 8ನೇ ಅಧ್ಯಾಯವು ಯೇಸುಕ್ರಿಸ್ತನನ್ನು ಪರಲೋಕದ ದೇವದರ್ಶನಗುಡಾರದ ಮಹಾಯಾಜಕನಾಗುವುದನ್ನು ತೋರಿಸುತ್ತದೆ. 9ನೇ ಅಧ್ಯಾಯವು ದೇವರ ಮತ್ತು ಆತನ ಜನರ ಮಧ್ಯೆ ಇರುವ ಒಡಂಬಡಿಕೆಯನ್ನು ನೆರವೇರಿಸುವ ಯಜ್ಞದ ಬಲಿಪಶುವಾದ ಕ್ರಿಸ್ತನನ್ನು ವರ್ಣಿಸುತ್ತದೆ. 10 ರಿಂದ 12ನೇ ಅಧ್ಯಾಯಗಳು

ಕ್ರಿಸ್ತನನ್ನು ಸೇನಾಧಿಪತಿಯಾದ ಮೀಕಯೇಲನಾಗಿ ದುಷ್ಟಸೇನಯ ಮೇಲೆ ಯುದ್ಧಮಾಡಿ ಜಯಶಾಲಿಯಾಗುವುದನ್ನು ದೇವಜನರನ್ನು ಮರಣದ ಅಧಿಕಾರದಿಂದ ಬಿಡಿಸಿ ಜಯಶಾಲಿಯಾಗುವುದನ್ನು ನಿರೂಪಿಸುತ್ತದೆ.

ಆದುದರಿಂದ ಕ್ರಿಸ್ತನು ದಾನಿಯೇಲ ಪುಸ್ತಕದ ಕೇಂದ್ರವ್ಯಕ್ತಿಯಾಗಿದ್ದಾನೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳೋಣ. ಈ ಪುಸ್ತಕದ ಪ್ರತಿ ಅಧ್ಯಾಯಗಳಲ್ಲಿ ಕ್ರಿಸ್ತನನ್ನು ಸೂಚಿಸುವ ಮೇಲಿನ ಆಲೋಚನೆಗಳ ಅಥವಾ ಅನುಭವಗಳನ್ನು ಕಾಣುತ್ತೇವೆ.

ಹೋರಾಟ, ಶೋಧನೆಗಳ ನಡುವೆ ಅಥವಾ ಮಹಾಸಂತೋಷ ಮತ್ತು ಅಭಿವೃದ್ಧಿಯ ಸಂದರ್ಭಗಳಲ್ಲಿ ಯೇಸುಕ್ರಿಸ್ತನನ್ನು ಕೇಂದ್ರವನ್ನಾಗಿ ಇಟ್ಟುಕೊಳ್ಳುವುದಕ್ಕೆ ಹೇಗೆ ಕಲಿಯಬಹುದು? ನಾವು ಹಾಗೆ ಮಾಡುವುದು ಮುಖ್ಯವಾಗಿದೆ ಯಾಕೆ?

**ಸೋಮವಾರ** **ಡಿಸೆಂಬರ್ 30**

## ದಾನಿಯೇಲ ಪುಸ್ತಕದ ಸಂರಚನೆ

ದಾನಿಯೇಲ ಪುಸ್ತಕದಲ್ಲಿ 2 ರಿಂದ 7 ಅಧ್ಯಾಯಗಳನ್ನು ಅರಮಾಯ ಭಾಷೆಯ ವಿಭಾಗವನಾಗಿ ವಿಂಗಡಿಸಲಾಗಿದೆ. ಇದರಲ್ಲಿ ಕೆಲವು ಅಧ್ಯಾಯಗಳು ಇಬ್ರಿಯ ಭಾಷೆಯಲ್ಲಿ ಇನ್ನು ಕೆಲವು ಅಧ್ಯಾಯಗಳು ಅರಮಾಯಿಕ್ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಕೆಳಗೆ ಕೊಟ್ಟಿರುವ ಸಂರಚನೆಯು ಈ ವಿಭಾಗದ ಪ್ರಧಾನ ಸಂದೇಶವನ್ನು ಇನ್ನೂ ಹೆಚ್ಚಾದ ರೀತಿಯಲ್ಲಿ ಭದ್ರಗೊಳಿಸಲು ಸಹಾಯ ಮಾಡುತ್ತದೆ.

ಎ. ನೆಬೂಕದ್ನೆಚ್ಚರನು ಕಂಡು ನಾಲ್ಕು ರಾಜ್ಯಗಳ ಕನಸು (ದಾನಿಯೇಲ 2)

ಬಿ. ದೇವರು ದಾನಿಯೇಲನ ಸ್ನೇಹಿತರನ್ನು ಉರಿವ ಆವಿಗೆಯಿಂದ ರಕ್ಷಿಸಿದುದು (ದಾನಿಯೇಲ 3ನೇ ಅಧ್ಯಾಯ)

ಸಿ. ನೆಬೂಕದ್ನೆಚ್ಚರನಿಗಾದ ನ್ಯಾಯತೀರ್ಪು (ದಾನಿಯೇಲ 4)

ಡಿ. ಬೇಲ್ತೆಶೆಚ್ಚರನಿಗಾದ ನ್ಯಾಯತೀರ್ಪು (ದಾನಿಯೇಲ 5)

ಇ. ದೇವರು ದಾನಿಯೇಲನನ್ನು ಸಿಂಹಗಳ ಗವಿಯಿಂದ ರಕ್ಷಿಸಿದುದು (ದಾನಿಯೇಲ 6)

ಎಫ್.ದಾನಿಯೇಲನು ಕಂಡ ನಾಲ್ಕು ರಾಜ್ಯಗಳ ಕನಸು (ದಾನಿಯೇಲ 7)

ಈ ವಿಧವಾದ ಸಾಹಿತ್ಯಕ ಜೋಡಣೆಯು ಮುಖ್ಯಾಂಶವನ್ನು ಸಂರಚನೆಯ ಕೇಂದ್ರದಲ್ಲಿಟ್ಟು ಕಣ್ಣಿಗೆ ಎತ್ತಿ ತೋರಿಸಲು ಸಹಾಯಮಾಡುತ್ತದೆ. ಇದು ಸಿ ಮತ್ತು ಡಿ ಇನ್ನು ಒಳಗೊಂಡಿದೆ (ದಾನಿಯೇಲ 4 ಮತ್ತು 5). ದೇವರು ನೆಬೂಕದ್ನೆಚ್ಚರನಿಂದ (ತಾತ್ಕಾಲಿಕವಾಗಿ) ಮತ್ತು ಬೇಲ್ತೆಶೆಚ್ಚರನಿಂದ (ಶಾಶ್ವತವಾಗಿ) ರಾಜ್ಯವನ್ನು ಕಿತ್ತುಕೊಳ್ಳುತ್ತಾನೆ. ಆದುದರಿಂದ ದಾನಿಯೇಲ 2 ರಿಂದ 7ನೇ ಅಧ್ಯಾಯಗಳು ಒಬ್ಬನನ್ನು ಸಿಂಹಾಸನದಲ್ಲಿ ಕೂರಿಸುವ ಮತ್ತೊಬ್ಬನನ್ನು ತೆಗೆದುಹಾಕುವ ಪರಮಾಧಿಕಾರವನ್ನು ದೇವರು ಹೊಂದಿದ್ದಾನೆಂದು ಎತ್ತಿ ತೋರಿಸುತ್ತದೆ.

ಪುನರಾವರ್ತನೆಯ ಒಂದು ಸಂದೇಶವನ್ನು ಬಹಳ ಪರಿಣಾಮಕಾರಿಯಾದ ರೀತಿಯಲ್ಲಿ ಸ್ಪಷ್ಟಪಡಿಸುವ ವಿಧಾನವಾಗಿದೆ. ಉದಾಹರಣೆಗೆ, ದೇವರು ಐಗುಪ್ತದ ಭವಿಷ್ಯವನ್ನು ಕುರಿತು ಫರೋಹನಿಗೆ ಎರಡು ಕನಸುಗಳನ್ನು ಕೊಟ್ಟನು (ಆ.ಕಾಂಡ 41:1–7). ಮೊದಲ ಕನಸಿನಲ್ಲಿ ಏಳು ಕೊಬ್ಬಿದ ಹಸುಗಳನ್ನು ಏಳು ಬಡಕಲು ಹಸುಗಳು ತಿಂದುಹಾಕುತ್ತವೆ. ಎರಡನೆಯ ಕನಸಿನಲ್ಲಿ ಪುಷ್ಟಿಯುಳ್ಳ 7 ತೆನೆಗಳನ್ನು ಬತ್ತಿಹೋದ 7 ತೆನೆಗಳು ತಿಂದುಹಾಕುವುದನ್ನು ಕಾಣುತ್ತಾನೆ. ಎರಡೂ ಕನಸುಗಳು ಒಂದೇ ಅರ್ಥವನ್ನು ಕೊಡುತ್ತಿವೆ, ಏಳು ವರ್ಷಗಳ ಸಮೃದ್ಧಿಯನ್ನು ಏಳು ವರ್ಷಗಳ ಬರಗಾಲವು ನಾಶಪಡಿಸಿತು.

ದಾನಿಯೇಲನ ಪುಸ್ತಕದಲ್ಲಿ ದೇವರು ಸಹಾ ಪುನರಾವರ್ತನೆಯನ್ನು ಉಪಯೋಗಿಸುತ್ತಾನೆ. ಸಮಗ್ರ ಮೂಲಸಂರಚನೆಯ ಪುನರಾವರ್ತನೆಯಲ್ಲಿ ನಾಲ್ಕು ಪ್ರವಾದನೆಯುಳ್ಳ ಚಕ್ರಗಳಿವೆ. ಅಂತಿಮದಲ್ಲಿ ಈ ಸಂರಚನೆಯು ದೇವರ ಆಡಳಿತವನ್ನು ತೋರಿಸುತ್ತದೆ. ಪ್ರವಾದನೆಯ ಪ್ರತಿ ಹೊರಗೆರೆಯು ಒಂದು ಸ್ಪಷ್ಟವಾದ ನೋಟವನ್ನು ನಿರೂಪಿಸಿದಾಗ್ಯೂ ಅವು ಒಟ್ಟಾಗಿ ಇತಿಹಾಸದ ಒಂದೇ ಅವಧಿಯನ್ನು ಆವರಿಸುತ್ತದೆ. ಇದನ್ನು ಈ ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ.

| ದಾನಿ 2 | ದಾನಿ 7 | ದಾನಿ 8,9 | ದಾನಿ 10–12 |
|---|---|---|---|
| ಬ್ಯಾಬಿಲೋನು | ಬ್ಯಾಬಿಲೋನು | | |
| ಮೇದ್ಯಪಾರಸಿಯ | ಮೇದ್ಯ–ಪಾರಸಿಯ | ಮೇದ್ಯ–ಪಾರಸಿಯ | ಮೇದ್ಯ–ಪಾರಸಿಯ |
| ಗ್ರೀಕು | ಗ್ರೀಕು | ಗ್ರೀಕು | |
| ರೋಮು | ರೋಮು | ರೋಮು | ರೋಮು |
| ದೇವರ ರಾಜ್ಯ ಸ್ಥಾಪನೆ | ಹೊಸಭೂಮಿಗೆ ನಡೆಸುವ ಪರಲೋಕ ತೀರ್ಪು | ದೇವದರ್ಶನ ಗುಡಾರದ ಶುದ್ಧೀಕರಣೆ | ಮಿಕಾಯೇಲನು ಏಳುವುದು |

ಈ ವಚನಗಳು ನಮ್ಮ ದೀರ್ಘಾವಧಿಯ ಪ್ರತೀಕ್ಷೆಯ ಬಗ್ಗೆ ಯಾವ ಮಹಾನಿರೀಕ್ಷೆಯನ್ನು ಹೊಂದಿವೆ? ದಾನಿ 2:44; ಕೀರ್ತ 9:7–12; 2 ಪೇತ್ರ 3:11–13.

**ಮಂಗಳವಾರ** **ಡಿಸೆಂಬರ್ 31**

## ದಾನಿಯೇಲನ ಪುಸ್ತಕದಲ್ಲಿ ಸರ್ವನಾಶದ ಪ್ರವಾದನೆಗಳು

ದಾನಿಯೇಲನ ಪುಸ್ತಕದಲ್ಲಿ ದಾಖಲಾಗಿರುವ ಪ್ರವಾದನಾ ದರ್ಶನಗಳು ಹಳೆ ಒಡಂಬಡಿಕೆಯ ಇನ್ನಿತರ ಪ್ರವಾದಿಗಳ ಸಂದೇಶಕ್ಕಿಂತ ವಿಭಿನ್ನವಾದ ಸ್ವರೂಪದ್ದಾಗಿವೆ. ದಾನಿಯೇಲನ ಪ್ರವಾದನೆಗಳು ನಾಶಕರ ವರ್ಗಕ್ಕೆ ಸೇರಿದ ಪ್ರವಾದನೆಯಾಗಿದೆ. ಹಳೆಒಡಂಬಡಿಕೆಯ ಇತರ ಪ್ರವಾದನೆಗಳು ಶಾಸ್ತ್ರೀಯವಾದ ಪ್ರವಾದನೆಗಳಾಗಿವೆ. ಈ ಎರಡು ಬಗೆಯ ಪ್ರವಾದನೆಗಳಲ್ಲಿರುವ ಮೂಲಭಿನ್ನತೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಬೈಬಲ್‌ನ ಇತರ ಪ್ರವಾದನೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಬಹಳ ಅವಶ್ಯಕವಾದುದಾಗಿದೆ. ಸರ್ವನಾಶಕ್ಕೆ ಸಂಬಂಧಿಸಿದ ಪ್ರವಾದನೆಗಳು ಇನ್ನಿತರ ಶಾಸ್ತ್ರೀಯ ಪ್ರವಾದನೆಗಳಿಗಿಂತ ಬಹಳ ವಿಚಿತ್ರವಾದ ಲಕ್ಷಣಗಳನ್ನು ತೋರಿಸುತ್ತವೆ.

ದರ್ಶನಗಳು ಮತ್ತು ಕನಸುಗಳು. ಸರ್ವನಾಶದ ಪ್ರವಾದನೆಗಳಲ್ಲಿ ದೇವರು ಮುಖ್ಯವಾಗಿ ದರ್ಶನಗಳಿಂದಲೂ ಕನಸುಗಳಿಂದಲೂ ತನ್ನ ಸಂದೇಶವನ್ನು ಪ್ರವಾದಿಗೆ ತಿಳಿಸುತ್ತಾನೆ. ಶಾಸ್ತ್ರೀಯ ಪ್ರವಾದನೆಗಳಲ್ಲಿ ಪ್ರವಾದಿಯು 'ದೇವರ ವಾಕ್ಯವನ್ನು' (ದರ್ಶನಗಳೂ ಸೇರುತ್ತವೆ) ಸ್ವೀಕರಿಸುತ್ತಾನೆ. ಸುಮಾರು ಒಂದು

ಸಾವಿರದ ಆರುನೂರು ಸಲ ಈ ವಾಕ್ಯವು ಅಲ್ಪಸ್ವಲ್ಪ ವ್ಯತ್ಯಾಸಗಳುಳ್ಳದ್ದಾಗಿ ಶಾಸ್ತ್ರೀಯ ಪ್ರವಾದನೆಗಳಲ್ಲಿ ವ್ಯಕ್ತವಾಗಿದೆ.

**ಸಂಯುಕ್ತ ಸಾಂಕೇತಿಕತೆ:** ಶಾಸ್ತ್ರೀಯ ಪ್ರವಾದನೆಯಲ್ಲಿ ಸಾಂಕೇತಿಕವಾದವುಗಳಿಗೆ ಒಂದು ಮಿತಿ ಇದೆ. ಜನ ಜೀವನಕ್ಕೆ ಸಂಬಂಧಪಟ್ಟ ನಿಜಜೀವನಕ್ಕೆ ಹತ್ತಿರವಾದ ಸಂಕೇತಗಳಿರುತ್ತವೆ. ಸರ್ವನಾಶದ ಪ್ರವಾದನೆಗಳಲ್ಲಿ ದೇವರು ಕಾಲ್ಪನಿಕವಾದ ಮಾನವ ವಾಸ್ತವತೆಗೆ ದೂರವಾದ ಸಂಕೇತಗಳನ್ನು ಅಂದರೆ ವಿಚಿತ್ರವಾದ ವಿಕಾರವಾದ ಕೊಂಬುಳ್ಳ ರೆಕ್ಕೆಗಳುಳ್ಳ ಪ್ರಾಣಿಗಳ ಸಂಕೇತವನ್ನು ತೋರಿಸುತ್ತಾನೆ. ದೈವಾಧಿಕಾರ ಮತ್ತು ಅನಿಬಂಧನತೆ ಶಾಸ್ತ್ರೀಯ ಪ್ರವಾದನಗಳಿಗೆ ವ್ಯತಿರಿಕ್ತವಾಗಿ, ಇಸ್ರಾಯೇಲ್ಯರೊಂದಿಗೆ ದೇವರು ಮಾಡಿದ ಒಡಂಬಡಿಕೆಗಳು ನೆರವೇರಲು ಮಾನವ ಪ್ರತಿಕ್ರಿಯೆ ಮೇಲೆ ಆತುಕೊಂಡಿರುವ ಪ್ರವಾದನೆಗಳು ಸರ್ವನಾಶದ ಪ್ರವಾದನೆಗಳು ನಿಬಂಧನರಹಿತವಾದವುಗಳು ಸರ್ವನಾಶದ ಪ್ರವಾದನೆಗಳಲ್ಲಿ ದೇವರು ದಾನಿಯೇಲನ ಕಾಲ ಮೊದಲ್ಗೊಂಡು ಅಂತ್ಯಕಾಲದವರೆಗೆ ಏಳುವ, ಬೀಳುವ ರಾಜ್ಯಗಳನ್ನು ತೋರಿಸುತ್ತಾನೆ. ಇಂತಹ ಪ್ರವಾದನೆಗೆ ದೇವರ ಭವಿಷ್ಯತ್ ಜ್ಞಾನದ ಮೇಲೆ ಮತ್ತು ಅಧಿಕಾರದ ಮೇಲೆ ಸಂಭವಿಸುತ್ತದೆ ಹೊರತು ಮಾನವನ ಆಯ್ಕೆಗಳ ಮೇಲಲ್ಲ.

ಓದಿರಿ: ಯೋನಾ 3:3–10. ಇದು ಶಾಸ್ತ್ರೀಯ ಪ್ರವಾದನೆಯೆ ಅಥವಾ ಸರ್ವನಾಶದ ಪ್ರವಾದನೆಯೆ? ನಿಮ್ಮ ಉತ್ತರದಿಂದ ಸಮರ್ಥಿಸಿರಿ. ದಾನಿಯೇಲ 7:6ರ ಬಗ್ಗೆ ಏನು ಹೇಳುವಿರಿ?

ಶಾಸ್ತ್ರೀಯ ಮತ್ತು ಸರ್ವನಾಶಕರವೆಂಬ ವಿಸ್ತಾರವಾದ ಪ್ರವಾದನೆಯ ವಿಧಗಳನ್ನು ಅರಿತವರಾಗಿ ದೊಡ್ಡ ಪ್ರಯೋಜನವನ್ನು ಪಡೆಯುತ್ತೇವೆ. ಈ ವಿಸ್ತಾರವಾದ ಪ್ರವಾದನೆಗಳನ್ನು ಜನರ ಸಂಪರ್ಕಕ್ಕೆ ತರಲು ದೇವರು ವಿಧವಿಧವಾದ ಮಾರ್ಗಗಳನ್ನು ಉಪಯೋಗಿಸುತ್ತಾನೆ (ಇಬ್ರಿಯ 1:1). ಎರಡನೆಯದಾಗಿ ಅಂತಹ ಅರಿವು ಸತ್ಯವೇದದ ಸೌಂದರ್ಯವನ್ನು ಮತ್ತು ಸಂಕೀರ್ಣತೆಯನ್ನು ಉತ್ತಮ ರೀತಿಯಲ್ಲಿ ಪ್ರಶಂಸಿಸುವುದಕ್ಕೆ ಸಹಾಯ ಮಾಡುತ್ತದೆ. ಮೂರನೆಯದಾಗಿ ಇಡೀ ಸತ್ಯವೇದದ ಸಾಕ್ಷಿ ಹೊಂದಿರುವ "ದೇವರ ಸತ್ಯವಾಕ್ಯ"ವನ್ನು ಸರಿಯಾಗಿ

ವಿವರಿಸುವುದಕ್ಕೆ ಸತ್ಯವೇದ ಪ್ರವಾದನೆಗಳನ್ನು ಅರ್ಥೈಸಿಕೊಳ್ಳಲು ಈ ಜ್ಞಾನವು ಸಹಾಯ ಮಾಡುತ್ತದೆ (2 ತಿಮೊಥಿ 2:15).

ಹೊಶೇಯ 3:4,5; ಅಮೋಸ 8:11; ಜಕರ್ಯ 9:1 ಮತ್ತು 14:4 ವಾಕ್ಯಗಳ ಆಧಾರದ ಮೇಲೆ ಕೆಲವು ಕ್ರೈಸ್ತರು ಈ ಅಂತ್ಯಕಾಲದ ಘಟನೆಗಳು ಮಧ್ಯಪೂರ್ವದಲ್ಲಿ ನಡೆಯುತ್ತವೆಯೆಂದು ನಿರೀಕ್ಷಿಸುತ್ತಾರೆ. ಹೀಗೆ ಅರ್ಥಮಾಡಿಕೊಳ್ಳುವುದರಿಂದ ಆಗುವ ತಪ್ಪೇನು? ವಿನಾಶಕರವಾದ ಮತ್ತು ಶಾಸ್ತ್ರೀಯುವಾದ ಪ್ರವಾದನೆಗಳ ನಡುವೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳುವುದರಿಂದ ಈ ಮೇಲಿನ ವಿಷಯದಲ್ಲಿ ಸ್ಪಷ್ಟತೆ ಹೊಂದಲು ಹೇಗೆ ಸಹಾಯ ನೀಡುತ್ತದೆ?

**ಬುಧವಾರ** **ಜನವರಿ 1**

## ದೇವರ ಕಾಲ ಪ್ರಮಾಣ

ದಾನಿಯೇಲನ ಸರ್ವನಾಶದ ಪ್ರವಾದನೆಯನ್ನು ಅಧ್ಯಯನ ಮಾಡುವಾಗ ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದ ಮತ್ತೊಂದು ಮುಖ್ಯಪರಿಕಲ್ಪನೆ ಯಾವುದೆಂದರೆ "ಐತಿಹಾಸಿಕ ವಿಧಾನ". ಈ ವಿಧಾನವು "ಐತಿಹಾಸಿಕವಾದ"ವೆಂತಲೂ ಕರೆಯಲ್ಪಡುತ್ತದೆ. ಇದನ್ನು ಭೂತಕಾಲವಾದಕ್ಕೆ ಭವಿಷ್ಯತ್ಕಾಲವಾದ ಮತ್ತು ಆದರ್ಶವಾದಗಳಿಗೆ ವಿರುದ್ಧವಾದ ಆಲೋಚನೆಗಳೊಂದಿಗೆ ಹೋಲಿಸಿದಾಗ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಭೂತಕಾಲವಾದವು ದಾನಿಯೇಲ ಪುಸ್ತಕದಲ್ಲಿ ಘೋಷಿಸಿರುವ ಎಲ್ಲ ಘಟನೆಗಳನ್ನು ಭೂತಕಾಲದಲ್ಲಿ ನಡೆದಿರುವಂತೆ ಪರಿಗಣಿಸುತ್ತದೆ. ಭವಿಷ್ಯತ್ಕಾಲವಾದವು ಇವುಗಳನ್ನು ಭವಿಷ್ಯತ್ಕಾಲದಲ್ಲಿ ನೆರವೇರುತ್ತವೆಯೆಂದು ವಾದಿಸುತ್ತದೆ.

ಆದರ್ಶವಾದವು ಸರ್ವನಾಶದ ಪ್ರವಾದನೆಗಳ ಸಾಮಾನ್ಯವಾದ ಆತ್ಮೀಕವಾಸ್ತವತೆಗೆ ಸಂಕೇತವಾಗಿದ್ದು ಅವುಗಳಿಗೆ ಯಾವುದೇ ನಿರ್ದಿಷ್ಟವಾದ ಐತಿಹಾಸಿಕ ಉಲ್ಲೇಖಗಳಿಲ್ಲ. ಐತಿಹಾಸಿಕವಾದ ಇದರಲ್ಲಿ ನಿರಂತರವಾದ ಐತಿಹಾಸಿಕ ಘಟನೆಗಳ ಸರ್ವನಾಶಪ್ರವಾದನೆಯ ಸರಣಿಯನ್ನು ದೇವರು ಪ್ರವಾದನೆಯ ಕಾಲದಿಂದ ಅಂತ್ಯಕಾಲದವರೆಗೆ ತೋರಿಸುತ್ತಾನೆ. ದಾನಿಯೇಲನ

ಪುಸ್ತಕವನ್ನು ಅಧ್ಯಯನ ಮಾಡುತ್ತಾ ಹೋದಂತೆ ಈ ಪುಸ್ತಕದಲ್ಲಿರುವ ಮುಖ್ಯವಾದ ದರ್ಶನವು ಹೊಸವಿವರಣೆಯೊಂದಿಗೆ ಪುನರಾವರ್ತನೆಯಾಗುವುದನ್ನು ಕಾಣುತ್ತೇವೆ (ದಾನಿಯೇಲ 2,7,8,11). ಅಡ್ವೆಂಟಿಸ್ಟ್ ಮೊದಲಿಗರು, ಎಲೆನ್ ಜಿ ವೈಟಮ್ಮನವರು ಸೇರಿ ದಾನಿಯೇಲ ಮತ್ತು ಪ್ರಕಟನೆ ಪುಸ್ತಕದ ಪ್ರವಾದನೆಯನ್ನು ಐತಿಹಾಸಿಕ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳುತ್ತಾರೆ.

ಓದಿರಿ : ಅರಣ್ಯಕಾಂಡ 14:34 ಮತ್ತು ಯೆಹೆಜ್ಕೇಲ 4:5,6. ಪ್ರವಾದನೆಯ ಭಾಷೆಯಲ್ಲಿ ಒಂದುದಿನವೆಂಬುದು ಏನನ್ನು ಪ್ರತಿನಿಧಿಸುತ್ತದೆ?

ನಾವು ದಾನಿಯೇಲನ ಪುಸ್ತಕವನ್ನು ಅಧ್ಯಯನ ಮಾಡುತ್ತಾ ಹೋದಂತೆ ಪ್ರವಾದನಾ ಕಾಲವನ್ನು ವರ್ಷದಿನದ ನಿಯಮಕ್ಕೆ ಅನುಗುಣವಾಗಿ ಅಳೆಯಬೇಕು. ಪ್ರವಾದನೆಯಲ್ಲಿ ಹೇಳುವ ಒಂದು ದಿನವು ನಿಜವಾದ ಐತಿಹಾಸಿಕ ಕಾಲದ ಒಂದು ವರ್ಷಕ್ಕೆ ಸಮವಾಗುತ್ತದೆ. ಉದಾಹರಣೆಗೆ 2300 ಉದಯಾಸ್ತಮಾನಗಳು (ದಾನಿ 8:14) 2300 ವರ್ಷಗಳನ್ನು ಸಂಕೇತಿಸುತ್ತದೆಯೆಂದು ತಿಳಿಯಬೇಕು. ಅಂತೆಯೇ 70 ವಾರಗಳ ಪ್ರವಾದನೆಯನ್ನು 490 ವರ್ಷಗಳು ಎಂದು ತಿಳಿಯಬೇಕು (ದಾನಿ 9:24–27).

ಈ ಕಾಲಗಣನೆಯ ಪಟ್ಟಿ (ಮಾನದಂಡ) ಕೆಲವು ನೈಜಕಾರಣಗಳಿಂದ ಸರಿಯಾದ ಕ್ರಮವೆಂದು ತೋರುತ್ತದೆ. (1) ದರ್ಶನಗಳು ಸಾಂಕೇತಿಕವಾಗಿದ್ದು ಕಾಲಸೂಚನೆಯು ಸಾಂಕೇತಿಕವಾಗಿದೆ. (2) ದರ್ಶನದಲ್ಲಿ ವಿವರಿಸಲ್ಪಟ್ಟಿರುವ ಘಟನೆಗಳು ದೀರ್ಘಕಾಲಿಕವಾಗಿ ಕೆಲವೊಂದು ಸಲ ಅಂತ್ಯಕಾಲದ ಸಮಯದವರೆಗೆ ಬಿಚ್ಚುತ್ತಾ ಹೋಗುತ್ತದೆ. ಈ ಪ್ರವಾದನೆಗಳಿಗೆ ಸಂಬಂಧಪಟ್ಟ ಕಾಲದ ಉದ್ದವನ್ನು ಪ್ರವಾದನೆಗೆ ತಕ್ಕಹಾಗೆ ಅರ್ಥೈಸಬೇಕು. (3) ವರ್ಷ–ದಿನದ ನಿಯಮವು ದಾನಿಯೇಲನ ಪುಸ್ತಕದಿಂದ ದೃಢಪಡುತ್ತದೆ. ಒಂದು ಸ್ಪಷ್ಟವಾದ ಉದಾಹರಣೆಯು 70 ವಾರಗಳ ಪ್ರವಾದನೆ, ಇದು ಅರ್ತಷಸ್ತನ ಕಾಲದಿಂದ ಯೇಸುವು ಮೆಸ್ಸೀಯನಾಗಿ ಬರುವ ಕಾಲಕ್ಕೆ ವಿಸ್ತರಿಸಿಕೊಳ್ಳುತ್ತದೆ. ಆದುದರಿಂದ ಪ್ರವಾದನೆಯ ಕಾಲಾವಧಿ ಬಹಳ ವಿಷದವಾದ ಮತ್ತು ಸರಿಯಾದ ವಿಧಾನವನ್ನು ದಾನಿಯೇಲನ ಪುಸ್ತಕದಲ್ಲಿ ಕೊಟ್ಟಿರುವ ವರ್ಷ–ದಿನದ ನಿಯಮಕ್ಕೆ ಅನುಗುಣವಾಗಿದೆ.

ಕೆಲವು ಕಾಲ ಪ್ರವಾದನೆಗಳು ನೂರು ವರ್ಷಕ್ಕೆ, ಇನ್ನು ಕೆಲವು ಸಾವಿರ ವರ್ಷಗಳಿಗೂ ವ್ಯಾಪಿಸುತ್ತನೆ. ಇವುಗಳು ಸಹನೆಯ ಬಗ್ಗೆ ನಮಗೆ ಏನನ್ನು ಬೋಧಿಸುತ್ತವೆ?

**ಗುರುವಾರ** **ಜನವರಿ 2**

## ದಾನಿಯೇಲ ಪುಸ್ತಕದ ಪ್ರಸಕ್ತತೆ

ಸುಮಾರು 2500 ವರ್ಷಗಳ ಹಿಂದೆಯೇ ಬರೆಯಲ್ಪಟ್ಟರೂ ದಾನಿಯೇಲ ಪುಸ್ತಕವು ದೇವಜನರಿಗೆ 21ನೇ ಶತಮಾನದಲ್ಲೂ ಪ್ರಸಕ್ತವಾಗಿ ಉಳಿದಿದೆ. ದಾನಿಯೇಲ ಪುಸ್ತಕವು ಇಂದಿಗೂ ಮೂರು ಕ್ಷೇತ್ರಗಳಲ್ಲಿ ಪ್ರಸ್ತುತವಾಗಿರುವುದನ್ನು ಗಮನಿಸಬಹುದು.

ದೇವರು ನಮ್ಮ ಜೀವನಕ್ಕೆ ಪರಮಾಧಿಕಾರಿಯಾಗಿ ನಿಲ್ಲುತ್ತಾನೆ. ವಿಷಯಗಳು ತಪ್ಪಾಗಿಹೋದರೂ ಸಹಾ ದೇವರು ಪರಮಾಧಿಕಾರಿಯಾಗಿ ಮಾನವರ ಕೃತ್ಯಗಳ ಮೂಲಕ ಕಾರ್ಯನಿರ್ವಹಿಸಿ ತನ್ನ ಮಕ್ಕಳಿಗೆ ಉತ್ತಮವಾದದ್ದನ್ನು ಒದಗಿಸುತ್ತಾನೆ. ಬ್ಯಾಬಿಲೋನಿನಲ್ಲಿ ದಾನಿಯೇಲನಿಗಾಗುವ ಅನುಭವವು ಐಗುಪ್ತದಲ್ಲಿ ಯೋಸೇಫನಿಗೂ ಪರ್ಶಿಯಾದಲ್ಲಿ ಎಸ್ತರಳಿಗೂ ಆದ ಅನುಭವಕ್ಕೆ ಸಮವಾಗಿದೆ. ಈ ಮೂವರು ಯೌವನಸ್ಥರು ಅನ್ಯದೇಶದಲ್ಲಿ ಸೆರೆಯಾಳುಗಳಾಗಿ ಅನ್ಯದೇಶದ ಅಧಿಕಾರಕ್ಕೆ ಒಳಪಟ್ಟಿದ್ದರು. ಸಾಮಾನ್ಯ ಪರಿವೀಕ್ಷಕರಿಗೆ ಅವರು ದುರ್ಬಲರಂತೆ, ತಿರಸ್ಕರಿಸಲ್ಪಟ್ಟವರಂತೆ ಕಾಣಬಹುದು. ಆದಾಗ್ಯೂ ದೇವರು ಅವರನ್ನು ಬಲಪಡಿಸಿ ಶಕ್ತಿಯುತವಾದ ರೀತಿಯಲ್ಲಿ ಉಪಯೋಗಿಸಿದ್ದಾನೆ. ನಾವು ಶೋಧನೆಗಳನ್ನು, ಕಷ್ಟಗಳನ್ನು, ವಿರೋಧತೆಗಳನ್ನು ಎದುರಿಸುವಾಗ ದೇವರು ದಾನಿಯೇಲ, ಯೊಸೇಫ ಮತ್ತು ಎಸ್ತರಳಿಗೆ ಏನು ಮಾಡಿದನೆಂದು ಹಿಂದಿರುಗಿ ನೋಡಬಹುದು. ನಾವು ಕರ್ತನು ನಮ್ಮ ಕರ್ತನಾಗಿ ಉಳಿಯುತ್ತಾನೆ, ನಮ್ಮನ್ನು ಶೋಧನೆಗಳಲ್ಲಿ, ಕಷ್ಟಸಂಕಟಗಳಲ್ಲಿ ಕೈಬಿಡುವುದಿಲ್ಲವೆಂದು ನಂಬಿಕೊಳ್ಳಬಹುದು.

ದೇವರು ಚರಿತ್ರೆಯನ್ನು ನಿಯಂತ್ರಿಸುತ್ತಾನೆ. ಕೆಲವು ಸಂದರ್ಭಗಳಲ್ಲಿ ನಾವು ಗುರಿ ತಪ್ಪಿದವರಾಗಿ ಪಾಪ ಮತ್ತು ಹಿಂಸೆ ತುಂಬಿದ ಲೋಕದಲ್ಲಿ ಕಳವಳಪಟ್ಟು ಗೊಂದಲಕ್ಕೀಡಾಗುತ್ತೇವೆ. ಆದರೆ ದಾನಿಯೇಲನ ಸಂದೇಶವು ದೇವರು ಎಲ್ಲವನ್ನು

ನಿಯಂತ್ರಿಸುತ್ತಾನೆಂದು ಹೇಳುತ್ತದೆ. ದಾನಿಯೇಲ ಪುಸ್ತಕದ ಪ್ರತಿಯೊಂದು ಅಧ್ಯಾಯವೂ ದೇವರು ಚರಿತ್ರೆಯ ಅರಿವನ್ನು ಹತೋಟಿಯಲ್ಲಿಡುತ್ತಾನೆಂದು ಸಾರುತ್ತದೆ. ಎಲೆನ್ ಜಿ ವೈಟಮ್ಮನವರು ಹೇಳುವಂತೆ "ಮನುಷ್ಯನ ಚರಿತ್ರೆಯ ವೃತ್ತಾಂತವು ಜನಾಂಗದ ವೃದ್ಧಿ, ಸಾಮ್ರಾಜ್ಯಗಳ ಉನ್ನತಿ ಮತ್ತು ಅವನತಿ ಇವುಗಳೆಲ್ಲಾ ಮನುಷ್ಯನ ಸಂಕಲ್ಪ ಮತ್ತು ಸಾಮರ್ಥ್ಯದ ಮೇಲೆ ಆತುಕೊಂಡಿದೆ ಎಂದು ಗೋಚರಿಸುತ್ತದೆ. ಘಟನೆಗಳ ಸ್ವರೂಪತೆ ಬಹುಮಟ್ಟಿಗೆ ಮನುಷ್ಯನ ಅಧಿಕಾರ, ಆಕಾಂಕ್ಷೆ ಮತ್ತು ಸ್ವೇಚ್ಛೆಯಂತೆ ನಡೆಯುತ್ತವೆ ಎಂಬಂತೆ ಕಾಣಿಸುತ್ತದೆ. ಆದರೆ ದೇವರವಾಕ್ಯದ ಪ್ರಕಾರ ತೆರೆಯು ಮತ್ತೊಂದು ಬದಿಗೆ ಎಳೆಯಲ್ಪಡುತ್ತದೆ. ಮನುಷ್ಯನು ತನ್ನ ಹಿತಕ್ಕಾಗಿ ಆಡುವ ಎಲ್ಲಾ ಆಟ ಮತ್ತು ಎದುರಾಟ, ಅಧಿಕಾರ ಹಾಗೂ ವ್ಯಾಮೋಹ ಇವೆಲ್ಲವುಗಳು ಕರುಣಾಮಯಿಯ ಕಾರ್ಯಕರ್ತರಂತೆ ಮೌನವಾಗಿ, ತಾಳ್ಮೆಯಿಂದ ಆತನ ಚಿತ್ತದ ಪ್ರಕಾರ ಆತನ ಆಲೋಚನೆಗಳನ್ನು ನೆರವೇರಿಸುತ್ತವೆ" ಎಜುಕೇಷನ್, ಪು. 173.

ಅಂತ್ಯಕಾಲದ ತನ್ನ ಜನರಿಗೆ ದೇವರು ಆದರ್ಶವುಳ್ಳವರನ್ನು ಒದಗಿಸುತ್ತಾನೆ. ನಾವು ಅನೇಕ ಸಲ ಸತ್ಯವೇದಕ್ಕೆ ಸರಿಹೊಂದದ ಲೋಕದಾಲೋಚನೆಗಳನ್ನು ಹೊಂದಿರುವ ಸಮಾಜಕ್ಕೆ ದಾನಿಯೇಲ ಮತ್ತು ಆತನ ಸ್ನೇಹಿತರು ಆದರ್ಶಪ್ರಾಯರಾಗಿದ್ದಾರೆ. ಬ್ಯಾಬಿಲೋನ್ ವ್ಯವಸ್ಥೆಗೆ ತಮ್ಮ ನಂಬಿಕೆಯಲ್ಲಿ ರಾಜಿ ಮಾಡಿಕೊಳ್ಳುವಂತೆ ಬರುವ ಒತ್ತಾಯಗಳು ರಿಯಾಯ್ತಿಗಳು ದೇವರ ಮೇಲಿನ ಅವರ ಬದ್ಧತೆಯನ್ನು ನಿರಾಕರಿಸುವ ಸಂದರ್ಭದಲ್ಲಿ ಅವರು ದೇವರವಾಕ್ಯಕ್ಕೆ ನಂಬಿಗಸ್ತರಾಗಿಯೇ ಉಳಿದರು. ದೇವರ ಮೇಲೆ ಅವರಿಗಿದ್ದ ಪರಿಪೂರ್ಣವಾದ ಬದ್ಧತೆಯು, ನಂಬಿಗಸ್ತಿಕೆಯ ಅನುಭವವು ನಾವು ಸುವಾರ್ತೆಗೆ ವಿರೋಧತೆ ಮತ್ತು ಹಿಂಸೆಯನ್ನು ಅನುಭವಿಸುವಾಗ ಧೈರ್ಯವನ್ನು ಕೊಡುತ್ತದೆ. ದಾನಿಯೇಲನು ರಾಜ್ಯಕ್ಕೆ ಸಮಾಜಕ್ಕೆ ಕೊಡುಗೆ ಕೊಡುತ್ತಲೇ ಇರುವಾಗಲೂ ದೇವರಿಗೂ ಸಹ ಬದ್ಧನಾಗಿ ಉಳಿಯುವುದನ್ನು ತೋರಿಸುತ್ತಾನೆ.

ಓದಿರಿ : ದಾನಿಯೇಲ 9:23, 10:11, 12 ಮತ್ತು ಮತ್ತಾಯ 10:29–31 ನಮ್ಮ ವೈಯಕ್ತಿಕ ಹೋರಾಟದಲ್ಲಿ ದೇವರಿಗಿರುವ ಆಸಕ್ತಿಯ ಬಗ್ಗೆ ಈ ವಚನಗಳು ಏನು ಹೇಳುತ್ತವೆ?

**ಶುಕ್ರವಾರ** **ಜನವರಿ 3**

**ಹೆಚ್ಚಿನ ಚಿಂತನೆಗಾಗಿ :** ತಮ್ಮ ಸೃಷ್ಟಿಕರ್ತನ ಚಿತ್ತಗಳ ಬಗ್ಗೆ ಹೆಚ್ಚು ಪರಿಚಯ ಮಾಡಿಕೊಳ್ಳುವುದಕ್ಕೆ ಬಯಸುವವರೆಲ್ಲರಿಗೂ ಸತ್ಯವೇದವು ಮಾರ್ಗದರ್ಶಿಯಂತೆ ವಿನ್ಯಾಸ ಮಾಡಲ್ಪಟ್ಟಿದೆ (ರೂಪಿಸಲ್ಪಟ್ಟಿದೆ). ದೇವರು ಮನುಷ್ಯರಿಗೆ ನಿಶ್ಚಯವಾಗಿ ನಡೆಯುವ ಪ್ರವಾದನಾ ವಾಕ್ಯಗಳನ್ನು ಕೊಟ್ಟನು; ದೇವದೂತರು ಮಾತ್ರವಲ್ಲದೆ ಸ್ವತಃ ಯೇಸುಕ್ರಿಸ್ತನೇ ದಾನಿಯೇಲನಿಗೂ ಯೋಹಾನನಿಗೂ ಅತಿ ಶೀಘ್ರದಲ್ಲಿ ನಡೆಯುವ ಘಟನೆಗಳ ಬಗ್ಗೆ ತಿಳುವಳಿಕೆ ಕೊಡುವುದಕ್ಕೆ ಬಂದನು. ನಮ್ಮ ರಕ್ಷಣೆಗೆ ಸಂಬಂಧಿಸಿದ ವಿಷಯಗಳು ರಹಸ್ಯವಾಗಿ ಉಳಿಯುವಂತೆ ಬಿಡಲಿಲ್ಲ. ಪ್ರಾಮಾಣಿಕವಾಗಿ ಸತ್ಯವನ್ನು ಶೋಧಿಸುವವರಿಗೆ ಗೊಂದಲ ಉಂಟುಮಾಡುವಂತೆ ಮತ್ತು ದಾರಿ ತಪ್ಪಿಸುವಂತೆ ಇವು ಪ್ರಕಟಿಸಲ್ಪಟ್ಟಿಲ್ಲ. ಕರ್ತನು ಪ್ರವಾದಿಯಾದ ಹಬಕ್ಕೂಕನಿಗೆ "ನಿನಗಾದ ದರ್ಶನವನ್ನು ಬರೆ; ಓದುತ್ತಿರುವವರೂ ಸಹಾ ಶೀಘ್ರವಾಗಿ ಓದುವಂತೆ ಹಲಿಗೆಗಳ ಮೇಲೆ ಅದನ್ನು ಕೆತ್ತು (ಹಬಕ್ಕೂಕ 2:2) ಎಂದು ಹೇಳಿದನು.

ಪ್ರಾರ್ಥನಾ ಪೂರ್ವಕ ಹೃದಯದಿಂದ ಅಧ್ಯಯನ ಮಾಡುವವರಿಗೆಲ್ಲಾ ದೇವರ ವಾಕ್ಯವು ಸರಳವಾಗಿದೆ. ಪ್ರಾಮಾಣಿಕವಾದ ಪ್ರತಿ ಆತ್ಮವು ಸತ್ಯದ ಬೆಳಕನ್ನು ಪಡೆಯುವುದು ನೀತಿವಂತರಿಗೆ ಪ್ರಕಾಶವು ಬಿತ್ತಲ್ಪಟ್ಟಿದೆ (ಕೀರ್ತ 97:11). "ಬಚ್ಚಿಟ್ಟ ನಿಧಿಯನ್ನು ಪ್ರಾಮಾಣಿಕವಾಗಿ ಹುಡುಕುವಂತೆ ಆತನ ವಾಕ್ಯವನ್ನು ಹುಡುಕದೇ ಹೋದರೆ ಯಾವ ಸಭೆಯು ಪರಿಶುದ್ಧತೆಯಲ್ಲಿ ಮುಂದುವರೆಯಲಾರದು" ಎಲೆನ್ ಜಿ ವೈಟ್, ಮಹಾಹೋರಾಟ ಪುಟ 521, 522.

ದಾನಿಯೇಲ ಮತ್ತು ಆತನ ಸ್ನೇಹಿತರ ಚರಿತ್ರೆಯನ್ನು ಅಧ್ಯಯನ ಮಾಡಿರಿ. ಅವರು ಜೀವಿಸಿದ್ದ ಸ್ಥಳವು ಎಲ್ಲಾ ಕಡೆಗಳಿಂದ ಶೋಧನೆ ಮತ್ತು ಸ್ವಾರ್ಥದಿಂದ ತುಂಬಿತ್ತು. ಆದಾಗ್ಯೂ ಅವರು ತಮ್ಮ ದೈನಂದಿನ ಜೀವಿತದಲ್ಲಿ ದೇವರನ್ನು ಮಹಿಮೆ ಪಡಿಸಿದರು. ಎಲ್ಲಾ ಕೆಟ್ಟತನವನ್ನು ಬಿಟ್ಟು ಬಿಡುವುದಕ್ಕೆ ಅವರು ದೃಢಮಾಡಿಕೊಂಡಿದ್ದರು. ತಮ್ಮನ್ನು ತಾವು ವೈರಿಯ ಮಾರ್ಗದಲ್ಲಿ ಇರಿಸಿಕೊಳ್ಳಲು

ನಿರಾಕರಿಸಿದರು. "ಹೇರಳವಾದ ಆಶೀರ್ವಾದಗಳಿಂದ ಅವರ ಅಚಲವಾದ ನಿಷ್ಠೆಗೆ ದೇವರು ಪ್ರತಿಫಲವನ್ನು ಕೊಡುವನು" ಎಲೆನ್ ಜಿ ವೈಟಮ್ಮನವರ, ಮ್ಯಾನುಸ್ಕ್ರಿಪ್ಟ್ ರಿಲೀಸಸ್ (224), ಪುಟ 169, 170.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಾವು ದಾನಿಯೇಲನ ಪುಸ್ತಕವನ್ನು ಓದುತ್ತಾ ಹೋದಂತೆ ಒಂದು ಬಲವಾದ ಅಂಶಕ್ಕೆ ಹಾದು ಬರುತ್ತೇವೆ. ದೇವರು ಎಲ್ಲದರ ಮೇಲೆ ಅಧಿಕಾರವನ್ನು ಹೊಂದಿರುತ್ತಾನಲ್ಲದೆ ನಮ್ಮೊಬ್ಬರ ಜೊತೆಗೆ ಬಹಳ ಆಳವಾಗಿ ಹತ್ತಿರವಾಗಿರುತ್ತಾನೆ. ಉದಾಹರಣೆಗೆ ದಾನಿಯೇಲ 2ನೇ ಅಧ್ಯಾಯದಲ್ಲಿ ನೋಡುವಂತೆ ಅನ್ಯರಾಜನಿಗೆ ಒಂದು ಕನಸನ್ನು ಕೊಡಲು ಸಮರ್ಥನಾಗಿದ್ದಾನೆ. ಮಲಗಿ ನಿದ್ರಿಸುತ್ತಿರುವವನ ಒಬ್ಬನ ಮನಸ್ಸಿನೊಳಕ್ಕೆ ಹೋಗಿ ಕನಸನ್ನು ಬಿತ್ತುವುದಕ್ಕೆ ನಾವು ಗ್ರಹಿಸಲಾರದಷ್ಟು ಹತ್ತಿರಕ್ಕೆ ಬರುತ್ತಾನೆ. ದೇವರು ಕನಸಿನ ಲಕ್ಷಣವನ್ನು ತಿಳಿದಿದ್ದಾನೆ. ಅಂತಿಮವಾಗಿ ಲೋಕದ ದೊಡ್ಡ ಸಾಮ್ರಾಜ್ಯಗಳ ಮೇಲೆ ನಿಯಂತ್ರಣ ಹೊಂದಿದ್ದಾನೆ ಮತ್ತು ಪ್ರತಿಯೊಂದು ಹೇಗೆ ಅಂತ್ಯವಾಗುತ್ತದೆ ಎಂಬುದನ್ನು ತಿಳಿದಿದ್ದಾನೆ. ಇವುಗಳ ವಾಸ್ತವತೆಯ ವರ್ಣನೆಯನ್ನು ನೋಡುವಾಗ ಯಾವ ಆದರಣೆಯನ್ನು ಮತ್ತು ನಿರೀಕ್ಷೆಯನ್ನು ಹೊಂದಬಹುದು? ಅದೇ ಸಂದರ್ಭದಲ್ಲಿ ಕರ್ತನು ನಮ್ಮ ಆಲೋಚನೆಗಳನ್ನೇ ತಿಳಿಯುವಷ್ಟು ಹತ್ತಿರದಲ್ಲಿದ್ದಾನೆ ಎಂಬುದು ಹೇಗೆ ಇದನ್ನು ನೀವು ಭಾವಿಸುವಂತೆ ಮಾಡುತ್ತದೆ? ಈ ಸಂದರ್ಭದಲ್ಲಿ ಶಿಲುಬೆಯ ವಾಗ್ದಾನವು ಬಹಳ ಮುಖ್ಯವಾಗುತ್ತದೆ ಏಕೆ?

2. ತರಗತಿಯಲ್ಲಿ ಶಾಸ್ತ್ರೀಯ ಪ್ರವಾದನೆಗಳು ಮತ್ತು ಸರ್ವನಾಶದ ಪ್ರವಾದನೆಗಳ ನಡುವೆ ಇರುವ ವ್ಯತ್ಯಾಸವೇನೆಂದು ಚರ್ಚಿಸಿರಿ. ಸತ್ಯವೇದದಲ್ಲಿ ಇವೆರಡರ ಬೇರೆ ಉದಾಹರಣೆಗಳನ್ನು ಎಲ್ಲಿ ಕಾಣುವಿರಿ?